Com.OS No.3/2021
PW.1

(ಸಾಕ್ಷಿಯನ್ನು ಈ ದಿನ ದಿನಾಂಕ 17.10.2022 ರಂದು ಪುನಃ ಕರೆಸಿ ಪ್ರಮಾಣ ವಚನ ಬೋಧಿಸಲಾಗಿದೆ)

**ಮುಂದುವರೆದ ಪಾಟೀ ಸವಾಲು ಪ್ರತಿವಾದಿಯರ ಪರ ಶ್ರೀ ಎ.ಕೆ.ವಕೀಲರಿಂದ :**

1. ವಾದ ಪತ್ರ ಬೇಡಿಕೆ 10 ರಲ್ಲಿ ಅನುಕ್ರಮ ಸಂಖ್ಯೆ 1 ರಿಂದ 5 ಗಳಿಗೆ ತೋರಿಸಿದಂತಹ ರೂ.30 ಆರ್ ಎಂ ಟಿ ಮತ್ತು ರೂ.90 ಆರ್ ಎಂ ಟಿ ಕರಾರಿನಲ್ಲಿ ಇರುವುದಿಲ್ಲ ಅನ್ನುವುದು ಕರಾರನ್ನು ನೋಡದೆ ಹೇಳಲು ಬರುವುದಿಲ್ಲ. ಇಲ್ಲಿ ಹೇಳಿದಂತೆ ರೂ.30 ಆರ್ ಎಂಟಿ ಮತ್ತು ರೂ. 90 ಆರ ಎಂ ಟಿ ದರಗಳ ಬಗ್ಗೆ ಪ್ರತಿವಾದಿಯರು ಲಿಖಿತ ರೂಪದಲ್ಲಿ ಕೊಟ್ಟಿರುತ್ತಾರೆ. ಈ ಕುರಿತಾದ ದಾಖಲೆಗಳನ್ನು ಹಾಜರಪಡಿಸಿರುತ್ತೇನೆ. ಈ ತರಹದ ಯಾವುದೇ ದಾಖಲೆಗಳನ್ನು ಹಾಜರುಪಡಿಸಿಲ್ಲ ಅನ್ನುವುದು ಸುಳ್ಳು. ಇದರ ಬಗ್ಗೆ ನನಗೆ ಯಾವುದೇ ಮಾಹಿತಿ ಇಲ್ಲ ಅನ್ನುವುದು ಸುಳ್ಳು. ಬೇಡಿಕೆ 10 ರ ಅಡಿಯಲ್ಲಿ ತೋರಿಸಿದಂತಹ ಒಟ್ಟು ಮೊತ್ತ ರೂ.2,21,83,988/- ಗೆ ಸಂಬಂಧಿಸಿದಂತೆ ವಿವರವಾದ ಲೆಕ್ಕ ಪತ್ರಿಕೆ ಹಾಜರುಪಡಿಸಿಲ್ಲ ಅನ್ನುವುದು ಸುಳ್ಳು. ನಿಪಿ.97 ರ ಪ್ರಕಾರ ಹಾಜರುಪಡಿಸಿರುತ್ತೇನೆ. ನಮ್ಮ ಜನರು ನಿಪಿ.97 ನ್ನು ತಯಾರಿಸಿರುತ್ತಾರೆ. ತಯಾರಿಸಿದವರು ಹೆಸರು ನೆನಪಿಲ್ಲ. ನಿಪಿ.97 ರ ಬಗ್ಗೆ ವಾದ ಪತ್ರದಲ್ಲಿ ಬೇಡಿಕೆ 10 ಕ್ಕೆ ಕುರಿತಂತೆ ಸ್ಪಷ್ಟವಾಗಿ ವಿವರಿಸಿಲ್ಲ ಅನ್ನುವುದು ಸುಳ್ಳು. ಈ ಮೇಲೆ ಹೇಳಿದಂತಹ ರೂ.2,21,83,988/- ವನ್ನು ಕೊಡಲು ಪ್ರತಿವಾದಿಯರು ಹೊಣೆಗಾರರು ಅಲ್ಲ ಅನ್ನುವುದು ಸುಳ್ಳು.

2. ಅನುಕ್ರಮ 11 ರ ಬೇಡಿಕೆಯ ಕೆಲಸವನ್ನು ನಾವೇ ಮುಂದೂಡಿಕೊಂಡು ಬಂದಿದ್ದೇವು ಅನ್ನುವುದು ಸುಳ್ಳು. ಅನುಕ್ರಮ ಸಂಖ್ಯೆ 11 ರ ಕೆಲಸಕ್ಕೆ

ಪ್ರತಿವಾದಿಗಳಿಂದ ಅಡೆತಡೆಗಳು ಇರಲಿಲ್ಲ ಅನ್ನುವುದು ಸುಳ್ಳು. ನಾವೇ ಸಮಯಕ್ಕೆ ಸರಿಯಾಗಿ ಕೆಲಸ ಮಾಡಿಲ್ಲ ಅನ್ನುವುದು ಸುಳ್ಳು. ಅನುಕ್ರಮ ಸಂಖ್ಯೆ 11 ರಲ್ಲಿ ತೋರಿಸಿದಂತೆ ನಮಗೆ ರೂ.40,97,724/- ರಷ್ಟು ಹಾನಿ ಸಂಭವಿಸಿಲ್ಲ ಅನ್ನುವುದು ಸುಳ್ಳು. ಈ ಹಣ ಪಾವತಿಗೆ ಎದುರುದಾರರು ಹೊಣೆಗಾರರು ಅಲ್ಲ ಅನ್ನುವುದು ಸುಳ್ಳು.

3. ವಾದ ಪತ್ರ ಅನುಕ್ರಮ ಸಂಖ್ಯೆ 12 ರ ಬೇಡಿಕೆಯ ಪ್ರಕಾರ ನಾವು ಹಣ ಸ್ವೀಕರಿಸಿದ್ದೇವೆ ಅನ್ನುವುದು ನಿಜ. ಈ ಹಣವನ್ನು ನಾವು ತಕರಾರಿಗೊಳಪಟ್ಟು ಸ್ವೀಕರಿಸಿದ್ದೇವೆ. ನಮ್ಮ ತಕರಾರನ್ನು ಪ್ರಕರಣದಲ್ಲಿ ಹಾಜರುಪಡಿಸಿದ್ದೇವೆ. ಈ ಬೇಡಿಕೆಗೆ ಯಾವುದೇ ದಾಖಲೆಯನ್ನು ಪ್ರಕರಣದಲ್ಲಿ ಹಾಜರುಪಡಿಸಿಲ್ಲ ಅನ್ನುವುದು ಸುಳ್ಳು. ವಾದ ಪತ್ರದ ಪ್ರಕಾರ ಸದರಿ ಹಣವನ್ನು ಬಲವಂತಗೊಳಪಟ್ಟು ಪಾವತಿಸಲಾಗಿದೆ ಎಂದು ಹೇಳಲಾಗಿದೆ ಹೊರತು ತಕರಾರಿಗೊಳಪಟ್ಟು ಸ್ವೀಕರಿಸಿದ್ದೇನೆ ಎಂದು ಬರೆದಿಲ್ಲ ಅನ್ನುವುದು ಸುಳ್ಳು.

4. ವಾದ ಪತ್ರದ ಅನುಕ್ರಮ ಸಂಖ್ಯೆ 1 ರಿಂದ 12 ರ ಬೇಡಿಕೆಗಳಲ್ಲಿ ನಮೂದಿಸಿದ ಮೊತ್ತಗಳನ್ನು ಯಾವುದೇ ತಕರಾರು ಇಲ್ಲದೆ ಸ್ವಇಚ್ಛೆಯಿಂದ ಸ್ವೀಕರಿಸಿದ್ದೇವೆ ಅನ್ನುವುದು ಸುಳ್ಳು. ವಾದ ಪತ್ರದಲ್ಲಿ ಒಡಂಬಡಿಗೆ ಅನುಬಂಧ 52 ರ ಪ್ರಕಾರ ಲೆಕ್ಕ ಮಾಡಿ ನಮಗೆ ಬರಬೇಕಾಂತಹ ಎಲ್ಲಾ ಹಣವನ್ನು ನಾವು ಪಡೆದುಕೊಂಡಿದ್ದರಿಂದ ವಾದ ಪತ್ರದಲ್ಲಿ ನಮೂದಿಸಿಲಾದ ರೂ.1,56,10,715/- ಮತ್ತು ರೂ.4,00,48,035/- ಇವು ಕಾಲ್ಪನಿಕ ಮೊತ್ತ ಅನ್ನುವುದು ಸುಳ್ಳು. ಈ ಕಾರಣದಿಂದ ಪ್ರತಿವಾದಿಯರು ರೂ.4,00,48,035/- ಪಾವತಿಸಲು ಹೊಣೆಗಾರರು ಅಲ್ಲ ಅನ್ನುವುದು ಸುಳ್ಳು.

5. ವಾದ ಪತ್ರ ಅನುಕ್ರಮ ಸಂಖ್ಯೆ 3 ಮತ್ತು 13 ರ ಬೇಡಿಕೆಗಳು ಒಂದೇ ಅನ್ನುವುದು ಸುಳ್ಳು. ಬೇಡಿಕೆ 13 ಅಡಿಯಲ್ಲಿನ ನೀರು ಸರಬರಾಜು ಕೆಲಸಕ್ಕೆ ಸಂಬಂಧಿಸಿದಂತೆ ಹಣ ಪಾತಿಸುವ ಬಗ್ಗೆ ನಮ್ಮ ಹಾಗೂ ಪ್ರತಿವಾದಿಯರ ಮಧ್ಯೆ ಯಾವುದೇ ಲಿಖಿತ ಒಡಂಬಡಿಕೆ ಇರುವುದಿಲ್ಲ ಅನ್ನುವುದು ಸರಿ. ಆದ್ದರಿಂದ ಬೇಡಿಕೆ 13 ರಲ್ಲಿನ ಮೊತ್ತ ಪಾವತಿಸಲು ಪ್ರತಿವಾದಿಯರು ಹೊಣೆಗಾರರು ಅಲ್ಲ ಅನ್ನುವುದು ಸುಳ್ಳು. ವಾದ ಪತ್ರ ಸಂಖ್ಯೆ 14 ರ ಬೇಡಿಕೆಯ ಕುರಿತಂತೆ ಯಾವ ಅವಧಿಯಿಂದ ಯಾವ ಅವಧಿಯವರೆಗೆ ಎಷ್ಟು ಜನ ಕಾರ್ಮಿಕರು ಮತ್ತು ಎಷ್ಟು ಯಂತ್ರೋಪಕರಣಗಳು ಕೆಲಸವಿಲ್ಲದೆ ನಿರುಪಯುಕ್ತವಾಗಿ ಇದ್ದರು ಎಂಬುದರ ಬಗ್ಗೆ ಕಾರ್ಮಿಕರ ಹೆಸರು ಮತ್ತು ಯಂತ್ರೋಪಕರಣಗಳ ವಿವರಗಳನ್ನು ವಾದ ಪತ್ರದಲ್ಲಿ ನಮೂದಿಸಿಲ್ಲ ಅನ್ನುವುದು ಸುಳ್ಳು. ಬೇಡಿಕೆ 14 ರಲ್ಲಿ ನಮೂದಿಸಿದ ಯಾವುದೇ ಬಗೆಯ ಅವಧಿಯಲ್ಲಿ ಕಾರ್ಮಿಕರಾಗಲಿ ಅಥವಾ ಯಂತ್ರೋಪಕರಣಗಳಾಗಲಿ ಕಾರ್ಯ ನಿರ್ವಹಿಸದೇ ಖಾಲಿ ಇರಲಿಲ್ಲ ಅನ್ನುವುದು ಸುಳ್ಳು. ಯಾವುದೇ ಯಂತ್ರೋಪಕರಣಗಳು ನಮ್ಮ ಹೆಸರಿನಲ್ಲಿರಲಿಲ್ಲ ಅನ್ನುವುದು ಸುಳ್ಳು.

6. ನಾವು ಪ್ರಕರಣದಲ್ಲಿ ಹಾಜರಪಡಿಸಿದಂತಹ ನಿಪಿ-1 ರಿಂದ ನಿಪಿ-103 ದಾಖಲೆಗಳ ಬಗ್ಗೆ ನಮ್ಮ ವಾದ ಪತ್ರದಲ್ಲಿ ಅವುಗಳ ಸ್ವರೂಪ ಮತ್ತು ಅಂತರ ಲೇಖವನ್ನು ವಿವರವಾಗಿ ನಮೂದಿಸಿದ್ದರೆ ಪ್ರತಿವಾದಿಯರು ಪರಿಣಾಮಕಾರಿಯಾದ ಪ್ರತಿವಾದ ಪತ್ರವನ್ನು ಹಾಕಬಹುದಾಗಿತ್ತು ಆದರೆ ಅಂತಹ ಒಂದು ಪ್ರತಿವಾದ ಪತ್ರವನ್ನು ತಪ್ಪಿಸುವ ಉದ್ದೇಶದಿಂದ ನಮ್ಮ ವಾದ ಪತ್ರದಲ್ಲಿ ಕೇವಲ ದಾಖಲೆಗಳ

ಸಂಖ್ಯೆಯನ್ನು ನಮೂದಿಸಿ ಪ್ರತಿವಾದಿಯರ ಪ್ರತಿರಕ್ಷಣ ಹಕ್ಕನ್ನು ಮೊಟಕುಗೊಳಿಸಿದ್ದೇವೆ ಅನ್ನುವುದು ಸುಳ್ಳು.

7. ನಿಪಿ-3 ರಿಂದ ನಿಪಿ-66 ರ ಅಡಿಯಲ್ಲಿ ಗುರುತಿಸಲಾದ ದಾಖಲೆಗಳು ನಮ್ಮ ಅನುಕೂಲಕ್ಕಾಗಿ ನಾವೇ ಸೃಷ್ಟಿಸಿಕೊಂಡತಹ ದಾಖಲೆಗಳನ್ನು ಅನ್ನುವುದು ಸುಳ್ಳು. ದಾವಾ ಕೆಲಸವು 1990 ರಲ್ಲಿ ಮುಗಿದಿರುತ್ತದೆ. ಕೆಲಸದ ಯೋಜನಾ ಸ್ಥಳವು ಶಹಪೂರ ತಾಲೂಕಿನಲ್ಲಿ ಬರುತ್ತದೆ. ನಾವು ಮಾಡಿದಂತಹ ಕೆಲಸ ಸಂಪೂರ್ಣಗೊಂಡ ನಂತರ ಅಂತಿಮ ಅಳತೆಯನ್ನು ಮಾಡಿಕೊಳ್ಳುವಂತೆ ಪ್ರತಿವಾದಿಯರಿಗೆ ಲಿಖಿತವಾಗಿ ತಿಳಿಸಿರುತ್ತೇವೆ. ಈ ಕುರಿತಾದ ದಾಖಲೆಗಳನ್ನು ಹಾಜರುಪಡಿಸಿರುತ್ತೇವೆ. ಒಡಂಬಡಿಕೆಯ ಪ್ರಕಾರ ಪ್ರತಿವಾದಿಯರು ನಮಗೆ ಕೊಡಬೇಕಾದಂತಹ ವಿವಾದರಹಿತ ಹಣವನ್ನು ಸಹ ಸಂಪೂರ್ಣವಾಗಿ ಪಾವತಿಸಿಲ್ಲ.

8. ಪ್ರತಿವಾದಿಯರು ಮಾಡಿದಂತಹ ಅಂತಿಮ ಅಳೆತೆಯ ಲೆಕ್ಕಚಾರದ ಪ್ರಕಾರ ಪ್ರತಿವಾದಿಯರು ನಮಗೆ ಕೊಡಬೇಕಾದಂತಹ ಹಣವನ್ನು ಸಂಪೂರ್ಣವಾಗಿ ಪಾವತಿಸುವದರೊಂದಿಗೆ ಹೆಚ್ಚಿಗೆ ಹಣ ಸಂದಾಯವಾಗಿರುತ್ತದೆ ಅನ್ನುವುದು ಸುಳ್ಳು. ನಮಗೆ ಪ್ರತಿವಾದಿಯರು ಪಾವತಿಸಿದ ಹೆಚ್ಚಿನ ಮೊತ್ತವನ್ನು ವಸೂಲಿ ಮಾಡಿಕೊಳ್ಳುತ್ತಾರೆ ಎನ್ನುವ ಭಯದಿಂದ ಅದನ್ನು ತಪ್ಪಿಸಲು ಈ ದಾವೆ ಹೂಡಿದ್ದೇನೆ ಅನ್ನುವುದು ಸುಳ್ಳು.

9. ನಮ್ಮಿಂದ ಹಣ ವಸೂಲಾತಿ ಬಾಕಿ ಇದ್ದ ಕಾರಣಕ್ಕಾಗಿ ವಾದ ಪತ್ರ ಅನುಕ್ರಮ ಸಂಖ್ಯೆ 15 ರ ಬೇಡಿಕೆಯ ಹಣವನ್ನು ಪ್ರತಿವಾದಿಯರು ತಡೆ ಹಿಡಿದಿದ್ದಾರೆ ಅನ್ನುವುದು ಸುಳ್ಳು.

10. ವಾದ ಪತ್ರ ಅನುಕ್ರಮ ಸಂಖ್ಯೆ 16 ಬೇಡಿಕೆಯು ಕಾಲಾತಿತ ಬೇಡಿಕೆ ಅನ್ನುವುದು ಸುಳ್ಳು. ಅಷ್ಟೆಅಲ್ಲದೇ ಈ ಬೇಡಿಕೆಯ ಹೊಣೆಗಾರಿಕೆಯು ಪ್ರತಿವಾದಿಯರಿಗೆ ಉದ್ಭವಿಸುವುದಿಲ್ಲ ಅನ್ನುವುದು ಸುಳ್ಳು. ಒಟ್ಟಿನಲ್ಲಿ ಪ್ರತಿವಾದಿಯರಿಂದ ಅನಧಿಕೃತ ಲಾಭ ಪಡೆಯುವ ಉದ್ದೇಶದಿಂದ ಈ ದಾವೆ ಹೂಡಿದ್ದೇನೆ ಅನ್ನುವುದು ಸುಳ್ಳು. ಆರಂಭದಲ್ಲಿ ಕೆಲಸದ ಸ್ಥಳವು ಗುಲಬರ್ಗಾ ಜಿಲ್ಲೆಯಲ್ಲಿ ಇತ್ತು ಅನ್ನುವುದು ನಿಜ. ಆ ಕಾರಣಕ್ಕಾಗಿ ಅರ್ಬಿಟರೇಷನ ಪ್ರಕರಣವನ್ನು ಗುಲಬರ್ಗಾದಲ್ಲಿ ಮಾಡಿದ್ದೇವು ಅನ್ನುವುದು ನಿಜ. ಈ ಕಾರಣದಿಂದ ಈ ನ್ಯಾಯಾಲಯಕ್ಕೆ ಪ್ರಕರಣದ ವಿಚಾರಣಾ ಅಧಿಕಾರಿ ಇಲ್ಲ ಅನ್ನುವುದು ಸುಳ್ಳು. ಪ್ರಕರಣದ ವಿಚಾರಣ ಅಧಿಕಾರವು ಯಾದಗಿರಿ ಜಿಲ್ಲಾ ನ್ಯಾಯಾಲಯಕ್ಕೆ ಬರುತ್ತದೆ ಅನ್ನುವುದು ಸುಳ್ಳು.

**ಮರು ವಿಚಾರಣೆ :** ಇಲ್ಲ.

(ನನ್ನ ಉಕ್ತಲೇಖನದಂತೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು)

ಓ. ಹೇ. ಕೇ. ಸರಿ ಇದೆ.

ಪ್ರಧಾನ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು.
ರಾಯಚೂರು.